ಒಂದು ಅಂಶ ಒಬ್ಬ ಕಲಾರಾಧಕರಿಗೆ/ಪ್ರೇಕ್ಷಕರಿಗೆ ಕೊಡುವ ಜವಾಬ್ದಾರಿಯ ಕಿಮ್ಮತ್ತು. ನಾಟಕದ, ಅಭಿನಯದ ಲೋಪವನ್ನು ಮುಚ್ಚಿ ಹಾಕಲು ಹೈಟೆಕ್ ಸಾಧನಗಳಿಲ್ಲ.

ವಾಟ್ ಯು ಸೀ ಈಸ್ ವಾಟ್ ಯು ಗೆಟ್. ಇದು ನೈಜ. ಇದೇ ವಾಸ್ತವ. ಇದು ನಿಮ್ಮ ಕಣ್ಣಾರೆ ನೋಡುವ ಅನುಭವಕ್ಕೆ ಸಮಾನಾಂತರವಾಗಿ ನಿಲ್ಲುವ ಇನ್ನೊಂದು ಗೆರೆ. ಯಾಕೆಂದರೆ ಇದು ವ್ಯಾಪಾರ ಅಲ್ಲ, ಮೋಸವಿಲ್ಲದ ಶ್ರದ್ಧೆ. ಸಿನಿಮಾ ಮಾಡಿ ಒಬ್ಬ ಕೋಟ್ಯಧೀಶ ಆಗಬಹುದು, ಅಥವಾ ಪಾಪರ್ ಆಗಬಹುದು. ನಾಟಕ ಮಾಡಿ ಒಬ್ಬ ಪಾಪರ್ ಆಗಬಹುದು, ಆ ಸಾಧ್ಯತೆಗಳೇ ಹೆಚ್ಚು. ಆದರೆ ಕೋಟ್ಯಧೀಶ ಆಗುವುದಂತೂ ದೂರದ ಮಾತು. ಹಾಗಿದ್ದಾಗೂ ನಟರು ಪ್ರೇಕ್ಷಕರ ಮುಂದೆ ಬರುತ್ತಾರೆ, ಹೊಸ ನಾಟಕಗಳು ನಡೆಯುತ್ತಲೇ ಇರುತ್ತವೆ, ವೇದಿಕೆ ಜೀವಂತವಾಗಿ ಮುಂದುವರೆಯುತ್ತದೆ.

ನಾಟಕದ ದಿನ ಹತ್ತಿರ ಬಂದ ಹಾಗೆ ನಿರ್ದೇಶಕರಿಗೆ ಎಲ್ಲಾ ನಟರ ಆರೋಗ್ಯದ ಬಗ್ಗೆ ಕಾಳಜಿ ಶುರುವಾಗುತ್ತದೆ. ಥೇಟ್ ಅಮ್ಮನ ಹಾಗೆ. ಒಬ್ಬರಿಗೆ ಹುಷಾರಿಲ್ಲ, ಗಂಟಲು ಕೆಟ್ಟಿದೆ ಅಂದರೂ ನಾಟಕದ ಸ್ವರೂಪವೇ ಹಾಳಾಗಿಹೋಗುತ್ತದೆ. ಯಾಕೆಂದರೆ, ಇಲ್ಲಿ ಡೈಲಾಗು ಮುಟ್ಟಿಸಲು ಢಡಂಗ್ ಢಡಂಗ್ ಎನ್ನಿಸುವ ಸ್ಪೀಕರುಗಳಿಲ್ಲ. ನಟನೇ ಸ್ವತಃ ತನ್ನ ಧ್ವನಿಯಲ್ಲೇ ಪ್ರೇಕ್ಷಕರ ಕಿವಿಗೆ ತಲುಪುವಂತೆ ಸ್ಪಷ್ಟ, ಎತ್ತರದ ಧ್ವನಿಯಲ್ಲಿ ಡೈಲಾಗ್ ಹೇಳಬೇಕು. ಅನವಶ್ಯಕ ಕಿರುಚಬಾರದು... ಅದಕ್ಕಾಗಿಯೇ ನಟರು 'ವಾಯ್ಸ್ ಟ್ರೇನಿಂಗ್' ತೆಗೆದುಕೊಂಡಿರುತ್ತಾರೆ. ಅವರು ಹೇಳಿದ ಮಾತು ಕೊನೆಯ ಸಾಲಿನವರಿಗೂ ಕೇಳಬೇಕು. (ಸಭಾಂಗಣದ ಹಿಂದಕ್ಕೆ ಇರುವ ಕೊನೆಯ ಸಾಲುಗಳನ್ನು ನಾಟಕರತ್ನ ಪದ್ಮಶ್ರೀ ಪುರಸ್ಕೃತ ರಂಗಭೂಮಿಯ ದಂತಕತೆಯೇ ಆಗಿರುವ ಗುಬ್ಬಿ ವೀರಣ್ಣನವರು ನಾಲ್ಕಾಣೆ ಕ್ಲಾಸು ಎಂದು ಹೇಳುತ್ತಿದ್ದರಂತೆ. ನಟರು/ಕಲಾವಿದರು ಆಡುವ ಮಾತುಗಳು ಅಲ್ಲಿ ಕೂತಿರುವವರಿಗೂ ಕೇಳಬೇಕು, ಬರೀ ಮುಂದೆ ಕೂತಿರುವ ಪ್ರೇಕ್ಷಕರಿಗೆ ಕೇಳಿದರಷ್ಟೇ ಸಾಲದು ಎಂದು ವೀರಣ್ಣನವರು ಹೇಳುತ್ತಿದ್ದುದನ್ನ ಅವರ ಮೊಮ್ಮಗಳಾದ ರಂಗಭೂಮಿ ಮೇರು ಪ್ರತಿಭೆ ಬಿ. ಜಯಶ್ರೀಯವರು ಆಗಾಗ ನೆನೆಯುತ್ತಾರೆ).

> ಆ ಕಲಾವಿದರಿಗೆ ನಿಮ್ಮ ಮೆಚ್ಚುಗೆಯ ಹೊರತು ಮತ್ತೇನೂ ಬೇಕಿಲ್ಲ. ಅಭಿಮಾನಿ ಸಂಘಗಳು, ಕಟೌಟು, ಹಾಲಿನ ಅಭಿಷೇಕ ಯಾವುದೂ ಬೇಡ. ನಿಮ್ಮ ಅವರ ನಡುವೆ ಕತ್ತಲೆಬೆಳಕಿನ ಆಟದಲ್ಲಿ ಕಟ್ಟಿಕೊಂಡ ಸೇತುವೆ ಮಾತ್ರವೇ ಸಾಕು.

ಒಬ್ಬ ನಟರ, ಹಾಡುವವರ ಆರೋಗ್ಯ ಕೆಟ್ಟರೆ ತಕ್ಷಣ ಅದೇ ಪಾತ್ರಕ್ಕೆ ಇನ್ನೊಬ್ಬ ನಟ/ಹಾಡುವವರು ತಯಾರಿ ಮಾಡಿಕೊಂಡು ಸಿದ್ಧವಿರಬೇಕು. ಪ್ರದರ್ಶನಕ್ಕೆ ಕೆಲವು ಘಂಟೆಗಳ ಮುನ್ನವೂ ಅನಿವಾರ್ಯ ಕಾರಣಗಳಿಂದ ಬೇರೆಯೊಂದು ಪಾತ್ರಕ್ಕೆ ನಟರು ತಯಾರಾದ ಉದಾಹರಣೆಗಳದೆಷ್ಟೋ ಉಂಟು. ಮುಂದೆ ಕೂತು ನೋಡುವ ಪ್ರೇಕ್ಷಕರಿಗೆ ಆ ಬದಲಾವಣೆಯ ಸುಳಿವೂ ಕೂಡ ಸಿಕ್ಕಿರುವುದಿಲ್ಲ. ಕೆಲವೊಮ್ಮೆ, ಸೌಲಭ್ಯವಿರುವ ನಾಟಕ ತಂಡಗಳಲ್ಲಿ 'ಡಬಲ್ ಕಾಸ್ಟಿಂಗ್' ಮಾಡಿಕೊಂಡಿರುತ್ತಾರೆ. ಅಂದರೆ, ಒಂದೊಂದು ಪಾತ್ರಕ್ಕೆ ಇಬ್ಬರ ತಯಾರಿ, ಅಥವಾ ಒಬ್ಬರನ್ನು ಒಂದೊಂದು ಪಾತ್ರಕ್ಕೆ